ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 6, May-June, 2024, Pp. 1-9.**
**©*IIMRD*, Mysuru**
**www.iimrd.com**

# ಶೃಂಗೇರಿ ತಾಲೂಕಿನ ನಲ್ಲೂರು ಗ್ರಾಮದ ವೀರಗಲ್ಲುಗಳು ಹೊಸ ಶೋಧ

**ಶ್ರೀದೇವಿ ತೇಜಸ್ವಿನಿ ಮತ್ತು ಪ್ರೊ. ಮಂಜುನಾಥ ಎಂ.ಜಿ.**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಹೇಮಗಂಗೋತ್ರಿ, ಹಾಸನ.

**ಸಾರಾಂಶ: (Abstract)**

*ವೀರಗಲ್ಲುಗಳ ಪರಂಪರೆ ಪ್ರಾಚೀನ ಕಾಲದಿಂದಲೂ ಇದೆ. ಇದು ಮಹತ್ತರವಾದ ಕಾರಣಕ್ಕಾಗಿ ಹೋರಾಡಿ ಪ್ರಾಣತೆತ್ತ ತ್ಯಾಗವೀರರನ್ನು ಸ್ಮರಿಸುವ ಸ್ಮಾರಕಶಿಲೆ. ನಾಗರೀಕತೆ ಬೆಳೆದಂತೆಲ್ಲಾ ಅದರ ಸ್ವರೂಪವೂ ವಿಭಿನ್ನವಾಗಿದೆ. ಸಾಧನೆ, ಸ್ವತಂತ್ರ, ಜಯ, ರಕ್ಷಣೆ ಹೀಗೆ ಹಲವು ಕಾರಣದಿಂದ ವೀರಗಲ್ಲು ಮಹತ್ವವನ್ನು ಪಡೆದಿದೆ. ಚರಿತ್ರೆಯಲ್ಲಿ ಈ ಕಲ್ಲುಗಳು ಯುದ್ಧದಲ್ಲಿ ಮಡಿದ ಯೋಧರ ಗೌರವಾರ್ಥವಾಗಿ ನಿರ್ಮಿಸಲಾದ ಸ್ಮಾರಕಗಳಾಗಿವೆ. ಅವುಗಳು ಭಾರತದಾದ್ಯಂತ ಸಾಮಾನ್ಯವಾಗಿ ಕಂಡುಬರುತ್ತವೆ. ಇಂತಹ ಸ್ಮಾರಕ ಶಿಲೆಗಳು ಅಂದರೆ ವೀರಗಲ್ಲುಗಳು ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕಿವೆ. ಶೃಂಗೇರಿ ತಾಲೂಕಿನಲ್ಲಿಯೂ ಅಲ್ಲಲ್ಲಿ ವೀರಗಲ್ಲುಗಳು ಸಿಕ್ಕಿವೆ. ಪ್ರಸ್ತುತ ಲೇಖನದಲ್ಲಿ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಲ್ಲೂರು ಗ್ರಾಮದಲ್ಲಿ ದೊರೆತಿರುವ ವೀರಗಲ್ಲುಗಳನ್ನು ಕುರಿತು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಶಾಸನಗಳು, ವೀರಗಲ್ಲುಗಳು, ಶೃಂಗೇರಿ, ನಲ್ಲೂರು ಗ್ರಾಮ.

## ಪೀಠಿಕೆ

ಶೃಂಗೇರಿ ಎಂದ ಕೂಡಲೇ ನೆನಪಾಗುವುದು ಅಲ್ಲಿನ ಶ್ರೀ ಶಾರದಾ ದೇವಾಲಯ, ವಿದ್ಯಾಶಂಕರ ದೇವಾಲಯ. ಧಾರ್ಮಿಕ ಹಿನ್ನಲೆಯಿಂದಷ್ಟೇ ಶೃಂಗೇರಿಯ ಚರಿತ್ರೆ ಪೂರ್ಣವಾಗುವುದಿಲ್ಲ. ಮನುಷ್ಯನ ಸಹಜ ಗುಣ ಹೋರಾಟ. ಈ ಹೋರಾಟಕ್ಕೆ ಸಂಬಂಧಿಸಿದಂತೆ ಇತಿಹಾಸದ ಕಥೆಯೇ ಚರಿತ್ರೆ. ಶೃಂಗೇರಿಯ ಚರಿತ್ರೆಯಲ್ಲಿ ಯುದ್ಧಗಳು, ಘರ್ಷಣೆಗಳು, ಹೋರಾಟ ಎಲ್ಲವೂ ಕಂಡಿವೆ. ಅವುಗಳ ಸಾಕ್ಷಿ ಎಂಬಂತೆ ವೀರಗಲ್ಲುಗಳು ಅಲ್ಲಲ್ಲಿ ಸಿಗುತ್ತವೆ. ಆದರೆ ಯಾವ ಘಟನೆಯಿಂದಾಗಿ ಆ ವೀರಗಲ್ಲು ನಿರ್ಮಿಸಿದ್ದಾರೆ ಎಂದು ತಿಳಿದು ಬಂದಿರುವುದಿಲ್ಲ. ಅಂತೂ ಹೋರಾಟದ ಸಾಕ್ಷಿ ಸಾಕಷ್ಟಿವೆ. ಕೇಳಿದ್ದೇವೆ. ಈ ಪರಿಸರದ ಚರಿತ್ರೆಗೆ ಸಂಬಂಧಿಸಿದಂತೆ ಇರುವ ಹೋರಾಟ, ವೀರಗಲ್ಲುಗಳ ಬಗ್ಗೆ ತಿಳುವಳಿಕೆ, ಲಭ್ಯವಾದ ಮಾಹಿತಿಯೊಂದಿಗೆ ಗಮನಿಸೋಣ. ಈ ತಾಲೂಕಿನಲ್ಲಿ ಅದೆಷ್ಟೋ ವೀರಗಲ್ಲುಗಳು ತೋಟ, ಗದ್ದೆ, ಕಾಡು ಇಲ್ಲವೇ ಮರಗಳ ಮಧ್ಯೆ ಕೆಲವೊಮ್ಮೆ ಯಾರಿಗೂ ಕಾಣದಂತೆ ಮರೆಯಾಗಿರುವುದುಂಟು. ಕೆಲವೊಂದು ಸಂದರ್ಭಗಳಲ್ಲಿ ಅವುಗಳ ಬಗ್ಗೆ ನಿರ್ಲಕ್ಷ್ಯವಹಿಸಿರುವುದಕ್ಕೆ ವೀರಗಲ್ಲಿನ ಉಬ್ಬುಶಿಲ್ಪದ ಚಿತ್ರಗಳೇ ಕಾರಣ. ಕೆಲವರಿಗೆ ಆ ಕಲ್ಲಿನಲ್ಲಿ ಕೆತ್ತಿರುವ ಚಿತ್ರವೇ ಒಂದಾದರೆ ಅವರ ಕಲ್ಪನೆ ಮತ್ತೊಂದು. ಕೆಲವು ತಪ್ಪುಗ್ರಹಿಕೆಯಿಂದ ಬೆಳಕಿಗೆ

ಬಂದಿರುವುದಿಲ್ಲ. ನನ್ನ ಕ್ಷೇತ್ರಕಾರ್ಯದಲ್ಲಿ ನಲ್ಲೂರಿನಲ್ಲಿ ಲಭ್ಯವಾದ ವಿವಿಧ ಬಗೆಯ ವೀರಗಲ್ಲುಗಳ ಬಗ್ಗೆ ಗಮನಿಸೋಣ.

ಆಗುಂಬೆ ಹಾಗೂ ಶೃಂಗೇರಿಯ (ನೋಡಿ ಚಿತ್ರ 1) ಹೆದ್ದಾರಿಯ ಸಮೀಪದಲ್ಲಿರುವ ನಲ್ಲೂರಿನಲ್ಲಿ ಕೆಲವು ವೀರಗಲ್ಲಿನ ಶಿಲ್ಪಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ನಲ್ಲೂರು ಗ್ರಾಮಕ್ಕೆ ಭೇಟಿಕೊಟ್ಟಾಗ ಶಿಶಿರ್ ಹಾಗೂ ಶಿವಣ್ಣ ಎಂಬ ವಕ್ತೃಗಳು ಈ ಚಿತ್ರಶಿಲ್ಪಗಳ ಬಗ್ಗೆ ಮಾಹಿತಿ ನೀಡಿದರು. ನಂತರ ಅವುಗಳನ್ನು ಒಂದೊಂದಾಗಿ ಪರಿಶೀಲಿಸಿದೆವು. ಶಿಶಿರ್ ಪುರಾತತ್ವ ಹಾಗೂ ಇತಿಹಾಸದ ಬಗ್ಗೆ ಸಾಕಷ್ಟು ಆಸಕ್ತಿಯುಳ್ಳವರಾಗಿದ್ದು ನಮಗೆ ಆ ಶಿಲ್ಪಗಳನ್ನು ಶೋಧಿಸಲು ಸಹಾಯ ಮಾಡಿದರು

ವೀರನ ಸ್ಮರಣೆಗಾಗಿ ನಿರ್ಮಿಸಿದ ಸ್ಮಾರಕಗಳನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ[1]. ಕೆಲವೊಮ್ಮೆ ಸಾಹಸ ಪ್ರವೃತ್ತಿಗಾಗಿ ಇಲ್ಲವೇ ಯಾವುದಾದರೊಂದು ರಕ್ಷಣೆಗಾಗಿ ನಡೆದ ಹೋರಾಟದಲ್ಲಿ ವ್ಯಕ್ತಿ ಮೃತನಾದಲ್ಲಿ ಆತನಿಗೆ ಸಂಬಂಧಿಸಿದಂತೆ ಸ್ಮಾರಕ ಶಿಲೆಯನ್ನು ನಿರ್ಮಿಸುವ ಕಲ್ಲನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ. ಕೆಲವೊಮ್ಮೆ ಹಸುಗಳನ್ನು ಕಳ್ಳರು ಕದ್ದೊಯ್ಯುವಾಗ, ಸ್ತ್ರೀಯರನ್ನು ಕದ್ದೊಯ್ಯುವಾಗ ಹೀಗೆ ಹಲವು ಸಂದರ್ಭದಲ್ಲಿ ಹೋರಾಟ ಅನಿವಾರ್ಯ. ಆ ಸಂದರ್ಭದಲ್ಲಿ ವ್ಯಕ್ತಿಯ ಶೌರ್ಯ ಮತ್ತು ಸಾಹಸವು ಮಾದರಿಯಾಗಿರುತ್ತದೆ. ಆ ಘಟನೆಯ ಒಂದು ಸ್ಮರಣೆಗಾಗಿ ವೀರಗಲ್ಲು ಹಾಕಿಸಿದಾಗ ಘಟನೆಯ ಬಗ್ಗೆ ತಿಳಿಯುತ್ತದೆ ಎಂಬ ಉದ್ದೇಶವೂ ಇರಬಹುದು. ಈ ಬಗೆಯ ಅಧ್ಯಯನದಲ್ಲಿ ಹಲವು ರೀತಿಯ ವೀರಗಲ್ಲುಗಳನ್ನು ಗಮನಿಸಬಹುದು. ಬೇಟೆ ವೀರಗಲ್ಲುಗಳು, ತುರುಗೋಳ್, ಪೆಣ್ಬುಯಲ್, ವೀರಮಾಸ್ತಿ, ವೀರನಿಸಿದಿಗಲ್ಲು ಹೀಗೆ ಪಟ್ಟಿಯಲ್ಲಿ ಸಮಾಜಕ್ಕೆ ಮಾದರಿಯಾಗುವ ಹೋರಾಟಗಳನ್ನೆಲ್ಲಾ ಸೇರಿಸಲು ಈ ವೀರಗಲ್ಲು, ವೀರರ ಕೈಗನ್ನಡಿಯಾಗಿದೆ.

ಮೊದಲಿಗೆ (ನೋಡಿ ಚಿತ್ರ 2) ಮನೆಯೊಂದರ ಪಕ್ಕ ದಟ್ಟ ಮರಗಳ ತೋಪು ಅಲ್ಲೇ ಆರಂಭದಲ್ಲೇ ಸಿಕ್ಕಿತು. ಶಾಸನಕ್ಕೆಂದು ತಯಾರಾದ ಅಕ್ಷರಗಳಿಲ್ಲದ ಉಬ್ಬುಶಿಲ್ಪದ ಶಿಲೆ. ಅದರಿಂದ ವಾಮನನ ಚಿತ್ರವಿದೆ. ಚಿತ್ರದ ಹಿನ್ನಲೆಯಿಂದ ದಾನಶಾಸನವಿರಬಹುದೇ ಎನ್ನಿಸಿತು. ಆದರೆ ಆ ಚಿತ್ರವನ್ನು ಬಿಟ್ಟರೆ ಮತ್ತೆ ಯಾವುದೇ ಮಾಹಿತಿಯೂ ಇಲ್ಲ. ಆ ಶಾಸನದ ಉದ್ದೇಶ ಇನ್ನೊಂದೆಡೆ ಹಾಕಿರಬಹುದು.

ಆ ಮರಗಳ ತೋಪಿನ ಮುಂದೆ ದಟ್ಟವಾದ ಗಿಡಗಳಿಂದ ಅವೃತ್ತವಾಗಿದ್ದ ಜಾಗಕ್ಕೆ ಹೋದಾಗ ಅಲ್ಲೊಂದು ಪೂಜೆ ಮಾಡುವ ಕಲ್ಲೊಂದು ಇತ್ತು. ಅಲ್ಲಿಂದ ಮುಂದೆ ಸಾಗುತ್ತಲೇ ಹಲವು ಬಗೆಯ ಉಬ್ಬುಶಿಲ್ಪದ ವೀರಗಲ್ಲುಗಳನ್ನು ಕಂಡೆವು. ಎರಡು ನಿಂತಿರುವ ಹಾಗೂ ಇನ್ನೊಂದು ನೆಲದ ಮೇಲೆ ಇದ್ದ ವೀರಗಲ್ಲುಗಳು ಕಂಡವು.

ಆ ಮೂರು ವೀರಗಲ್ಲುಗಳಲ್ಲಿ ದೊಡ್ಡ ವೀರಗಲ್ಲನ್ನು ಗಮನಿಸಿದರೆ, ಮಧ್ಯಭಾಗದಲ್ಲಿ (ನೋಡಿ ಚಿತ್ರ 3) ಪಲ್ಲಕ್ಕಿ ಹೊತ್ತ ಶಿಲ್ಪ, ಅಲ್ಲಿರುವ ಎಲ್ಲಾ ಶಿಲ್ಪಕ್ಕಿಂತಲೂ ಎತ್ತರವಾಗಿದ್ದು, ಈ ವೀರಗಲ್ಲಿನಲ್ಲಿ 3 ಪಟ್ಟಿಕೆಗಳಿವೆ. ಅರ್ಧವೃತ್ತಾಕಾರದ ಉದ್ದನೆಯ ಕಮಾನಿನ ಮೇಲ್ತುದಿಯಿಂದ ಕೂಡಿದೆ. ಈ ಕಲ್ಲಿನ ಸ್ವರೂಪವನ್ನು ಗಮನಿಸಿದಾಗ ಯಾವುದೋ ಒಂದು ಘಟನೆಗೆ ಸಾಕ್ಷಿಯಾದಂತೆ ಕಂಡು ಬರುತ್ತದೆ. ಪಲ್ಲಕ್ಕಿಯಲ್ಲಿ

[1] ಮಂಜುನಾಥ. ಎಂ.ಜಿ. (2011). *ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದಿ ಶಾಸನಗಳು*. ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪುಟ 10

ಕರೆದೊಯ್ಯುತ್ತಿರುವ ಮೃತ ವ್ಯಕ್ತಿ ವಿಶೇಷ ವ್ಯಕ್ತಿಯೇ ಇರಬೇಕು ಎನ್ನಿಸಿತು. ಅದಾಗ್ಯೂ ವೀರಗಲ್ಲನ್ನು ಗ್ರಹಿಸುವ ಸಾಮಾನ್ಯ ಕ್ರಮದಂತೆ ನೋಡಿದಾಗ, ಕೆಳಸ್ತರದ ಪಟ್ಟಿಕೆಯಲ್ಲಿ ಉಭಯ ಪಾರ್ಶ್ವಗಳಲ್ಲಿ ಕಹಳೆಯನ್ನು ಊದುತ್ತಿರುವ ವ್ಯಕ್ತಿಗಳಿಬ್ಬರಿದ್ದಾರೆ, ಅವರೊಡನೆ ವೀರರಿಬ್ಬರು ಅಭಿಮುಖವಾಗಿ ಗುರಾಣಿಯನ್ನು ಹಿಡಿದಿದ್ದಾರೆ. ಆ ವೀರಗಲ್ಲಿನ ಮೂಲಕ ವೀರರಿಬ್ಬರ ಶಿಲ್ಪದಲ್ಲಿ ಎಡ ಶಿಲ್ಪದಲ್ಲಿ ವೀರನ ತಲೆಯ ಮೇಲೆ ಶಿರಸ್ತ್ರಾಣವಿದೆ, ಆದರೆ ಬಲ ಶಿಲ್ಪದಲ್ಲಿ ಶಿರಸ್ತ್ರಾಣವಿಲ್ಲದ ವೀರನ ಮುಖವನ್ನು ಸ್ಪಷ್ಟವಾಗಿ ಕಂಡರಿಸಿದ್ದಾರೆ. ಆ ವೀರಗಲ್ಲಿನ ಮಧ್ಯಸ್ತರದ ಚಿತ್ರದಲ್ಲಿ ಪಲ್ಲಕ್ಕಿ ಹೊತ್ತ ಇಬ್ಬರು ಪರಸ್ಪರ ಅಭಿಮುಖವಾಗಿ ನಿಂತಿದ್ದಾರೆ. ಆ ಪಲ್ಲಕ್ಕಿಯಲ್ಲಿ ವೀರ ಮಲಗಿದ್ದಾನೆ. ವೀರನ ಕಾಲ್ಕೆಳಗೆ ಸ್ತ್ರೀ, ಅವರಿಬ್ಬರ ಮೇಲೆ ಮೂರು ಹಂತದ ಶಿಖರದ ಗೋಪುರವಿದೆ. ಇನ್ನುಳಿದಂತೆ ಮೇಲುಸ್ತರದಲ್ಲಿ ಶಿವಲಿಂಗ ಮತ್ತು ಎಡ ಪಾರ್ಶ್ವದಲ್ಲಿ ಸೂರ್ಯ ಹಾಗೂ ಬಲ ಪಾರ್ಶ್ವದಲ್ಲಿ ಚಂದ್ರನಿರುವಂತೆ ಕಂಡರಿಸಿದ್ದಾರೆ. ವೀರಗಲ್ಲಿನ ಮುಂದೆ (ನೋಡಿ ಚಿತ್ರ 8) ಪೀಠದಂತೆ ಕಲ್ಲಿದೆ. ಗಂಡಗಟ್ಟದಲ್ಲಿ, ಹರೂರುಮಕ್ಕಿಯಲ್ಲಿ ಇಂತಹ ಮಾದರಿ ಶಿಲ್ಪಗಳಿವೆ. ಅದೇ ಎತ್ತರ, ಅದೇ ಪಲ್ಲಕ್ಕಿಯೊಡನೆ ಇರುವ ಶಿಲ್ಪಗಳಿವೆ. ಈ ವೀರಗಲ್ಲಿನ ಪಕ್ಕದಲ್ಲೇ ಇರುವ ಇನ್ನೊಂದು ವೀರಗಲ್ಲಿನ (ನೋಡಿ ಚಿತ್ರ 7) ಶಿಲ್ಪವಿದೆ. ಇದರಲ್ಲಿಯೂ 3 ಪಟ್ಟಿಕೆಗಳಿವೆ.

**ಹುಲಿಬೇಟೆ ಹೋರಾಟದ ವೀರಗಲ್ಲು**

ಕ್ರೂರವಾದ ಪ್ರಾಣಿಗಳನ್ನು ಬೇಟೆಯಾಡುವಾಗ ಮರಣಿಸಿದ ವೀರರ ಸ್ಮಾರಕಗಳನ್ನು ಬೇಟೆ ವೀರಗಲ್ಲು ಎಂದು ಕರೆಯಲಾಗುತ್ತದೆ[2]. ನಲ್ಲೂರು ದಟ್ಟ ಮಲೆನಾಡಿನಲ್ಲಿರುವ ಒಂದು ಪುಟ್ಟಗ್ರಾಮ. ಈ ದಟ್ಟವಾದ ಮರಗಳ ನಡುವೆ ಹುಲಿಭೇಟೆಯನ್ನು ಮಾಡಿ ಮಡಿದ ವೀರನ ವೀರಗಲ್ಲು (ನೋಡಿ ಚಿತ್ರ 5) ಈ ಪರಿಸರದಲ್ಲಿ ಯಾವುದೇ ರಕ್ಷಣೆಗಾಗಿ ಹೋರಾಟ ನಡೆದಿರುವ ಸಾಕ್ಷಿಯಾಗಿ ಹುಲಿಬೇಟೆಯ ಚಿತ್ರವಿರುವ ವೀರಗಲ್ಲು ದೊರೆತಿದೆ. ಇದು ತ್ರುಟಿತಗೊಂಡಿದ್ದ ಸ್ಥಿತಿಯಲ್ಲಿ ದೊರೆತ್ತಿದ್ದು, ವೀರಗಲ್ಲಿನ ಸಾಮಾನ್ಯ ಲಕ್ಷಣದಂತೆ 3 ಪಟ್ಟಿಕೆಯಲ್ಲಿದೆ. ಓರ್ವ ವೀರನ ಮೇಲೆ ಹುಲಿಯು ಎರಗುವಂತೆ ಮತ್ತು ವೀರ ಬಾಣ ಪ್ರಯೋಗಿಸಲು ಸಿದ್ಧನಿರುವ ಚಿತ್ರವಿದೆ. ಹುಲಿ ಉಗುರು ಚೂಪಾಗಿದೆ, ಹುಲಿಯ ಎತ್ತರಕ್ಕೆ ಬಿಲ್ಲು ಇದೆ. ವೀರಗಲ್ಲಿನ ಕೆಳಸ್ತರದ ಶಿಲ್ಪವು ಎರಡು ತುಂಡಾಗಿದ್ದು, ಉಳಿದಿರುವ ಜಾಗದಲ್ಲಿ ಯೋಧನ ಶಿಲ್ಪವಿದೆ. ಆ ಪಟ್ಟಿಕೆಯನ್ನು ಅಷ್ಟು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಮಧ್ಯದಲ್ಲಿ ಎಡಗಡೆ ಓರ್ವ ವೀರ ಬಿಲ್ಲುಬಾಣಗಳನ್ನು ಹಿಡಿದಿದ್ದಾನೆ. ಅವನ ಬಾಣದ ಬತ್ತಳಿಕೆಯ ಹಿಂಬದಿಯಲ್ಲಿದೆ ಅದರ ಹಿಂದೆ ಒಬ್ಬರು ಇದ್ದಾರೆ. ಬಹುಶಃ ಸಹಾಯಕರಿದ್ದಿರಬಹುದು. ಆ ವೀರ ಶಿರಸ್ತ್ರಾಣವನ್ನಾಗಲೀ, ಕವಚವನ್ನಾಗಲೀ ತೊಟ್ಟಿಲ್ಲ. ವೀರನ ಕುತ್ತಿಗೆಗೆ ಕಂಠಾಭರಣವನ್ನು, ಕಾಲಿಗೆ ಕಡಗ ಹಾಕಿರುವಂತೆ, ಶಿಲ್ಪವನ್ನು ಕಂಡರಿಸಿದ್ದಾರೆ.

ಬೇಟೆ ಮತ್ತು ವೀರಗಲ್ಲುಗಳ ವಿಚಾರಕ್ಕೆ ಬಂದರೆ ಆತಕೂರು ಶಾಸನದ ಕಾಳಿಯ ಶಿಲ್ಪವು[3] ಶಾಸನದ ಉದ್ದೇಶವನ್ನು ಸ್ಪಷ್ಟಪಡಿಸಿತ್ತು. ಈ ಮೂಲಕ ಪ್ರಾಣಿಗಳು ಕಾದಾಡಲು ಆಯ್ಕೆಮಾಡಿಕೊಂಡ ಸನ್ನಿವೇಶಗಳು

[2] ಮಂಜುನಾಥ. ಎಂ.ಜಿ. (2011). ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದಿ ಶಾಸನಗಳು. ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪುಟ 6

[3] ಕೈದಾಳ ರಾಮಸ್ವಾಮಿ ಗಣೇಶ. *ಶಾಸನ ಸರಸ್ವತಿ.* 20007–2008, ಪುಟ. 324 ಅದೇ, ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಒಂದು ಶಾಸನ

ದೊರೆತಿವೆ. ಪೂಣಿಗ ಎಂಬ ನಾಯಿ ಹಂದಿಯೊಡನೆ ಹೋರಾಡಿ ಸತ್ತ ವಿಷಯವನ್ನು ತಿಳಿಸುತ್ತದೆ[4]. ಹೋರಾಡಿ ಸತ್ತ ವಿಚಾರವನ್ನು ಅಕ್ಷರಗಳಲ್ಲಿ ಹಾಕಿಸುತ್ತಾರೆ ಅದನ್ನು ವೀರಗಲ್ಲಿನ ಸ್ವರೂಪದಲ್ಲಿ ನೋಡಬಹುದು. ಆದರೆ ಪರಾಕ್ರಮವನ್ನು ತಿಳಿಸಲು ಶಿಲ್ಪದೊಡನೆ ಕೆತ್ತನೆ ಮಾಡಿಸುವುದು ಅಪರೂಪ. ಪ್ರಸ್ತುತ ನಲ್ಲೂರಿನಲ್ಲಿ ಓರ್ವ ವ್ಯಕ್ತಿ ಪ್ರಾಣಿಯೊಂದಿಗೆ ಹೋರಾಟ ಮಾಡಿರುವ ಚಿತ್ರಣದ ತ್ರುಟಿತವಾಗಿರುವ ಕಲ್ಲಿದೆ.

ಹುಲಿ ಮತ್ತು ವೀರನಿರುವ ಈ ಶಿಲ್ಪಕಲ್ಲಿನಲ್ಲಿ ಒಬ್ಬ ಯೋಧ ಬಿಲ್ಲುಬಾಣಗಳಿಂದ ಹುಲಿಯನ್ನು ಕೊಲ್ಲುವ ಚಿತ್ರ ವೀರಗಲ್ಲಿನ ಉದ್ದೇಶವನ್ನು ವ್ಯಕ್ತಪಡಿಸುತ್ತದೆ. ಈ ಗ್ರಾಮದ ಬಳಿಯಲ್ಲಿ ನಡೆದಿರಬಹುದಾದ ಯುದ್ಧ, ಹೋರಾಟದ ಸಂಕೇತವಾಗಿ ಈ ವೀರಗಲ್ಲುಗಳನ್ನು ಹಾಕಿಸಿದ್ದಾರೆ. ಇದರೊಟ್ಟಿಗೆ ಸಿಕ್ಕಿರುವ ಮಿಕ್ಕ ಶಿಲ್ಪಗಳಲ್ಲಿ ಹೀಗೆ ಪೂರಕ ಮಾಹಿತಿಯನ್ನು ಹೇಳುವಂತಿದೆ. ಅವುಗಳು ಸಮಕಾಲೀನವಾಗಿದ್ದಿರಬೇಕು.

**ಲೆಂಕವಾಳಿ, ಸಿಡಿದಲೆ ಅಥವಾ ಆತ್ಮಬಲಿದಾನದ ವೀರಗಲ್ಲು**

ಲೆಂಕ ಎಂದರೆ ಶೂರ[5] ಎಂಬ ಅರ್ಥಕೊಡುವ ವೀರನೊಬ್ಬ ತನ್ನ ಒಡೆಯನ ಮರಣ ಸಂದರ್ಭದಲ್ಲಿ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದ ಜ್ಞಾಪಕಾರ್ಥವಾಗಿ ನಿರ್ಮಿಸಿದ ಸ್ಮಾರಕಶಿಲ್ಪ. ಈ ರೀತಿ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದ ವೀರರಿಗೆ ಅದೊಂದು ಗೌರವ ಎಂಬರ್ಥದಲ್ಲಿ ಗ್ರಹಿಸಬಹುದು. ಕನ್ನಡ ನಾಡಿನಲ್ಲಿ 11ನೇ ಶತಮಾನದ ಬಳಿಕ ಇವುಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಾಗಿವೆ. ಪೂರ್ವದಲ್ಲೂ ಇದ್ದ ಬಗ್ಗೆ ಜನ್ನನು ತನ್ನ ಅನಂತನಾಥಪುರಾಣದಲ್ಲಿ ಲೆಂಕರು ತಮ್ಮ ತಲೆಗಳನ್ನು ಬಲಿಯಾಗಿ ಕೊಡುತ್ತಿದ್ದುದನ್ನು ವಿವರಿಸಿದ್ದಾನೆ[6]. ಅವುಗಳ ಸ್ವರೂಪವನ್ನು ಗಮನಿಸಿದಾಗ ತಲೆಗೆ ಮುಂದಲೆಯಾಗಿ ಸಿಡಿದಲೆಯನ್ನು ಕೊಡುತ್ತಿದ್ದರು.

**ಸಿಡಿದಲೆ**: ಆತ್ಮಾಹುತಿ ಮಾಡಿಕೊಳ್ಳಬಯಸುವ ವೀರರು ಬಿದಿರುಕೊಂಬೆಯೊಂದನ್ನು ನೆಲದಲ್ಲಿ ಗಟ್ಟಿಯಾಗಿ ನೆಟ್ಟು ಮತ್ತೊಂದು ತುದಿಯನ್ನು ಬಾಗಿಸಿ ಆ ತುದಿಗೆ ವೀರನ ಮುಡಿಯನ್ನು ಕಟ್ಟುತ್ತಿದ್ದರು. ನಂತರ ವೀರನ ತಲೆಯನ್ನು ಕತ್ತರಿಸಿದಾಗ ಹಿಂದಕ್ಕೆ ಸಿಡಿಯುತ್ತಿದ್ದ ಬಿದಿರುಗಳುವಿನೊಡನೆ ವೀರನ ತಲೆಯೂ ಸಿಡಿಯುತ್ತಿತ್ತು. ಈ ಪದ್ಧತಿಗೆ ಸಿಡಿದಲೆ ಎಂದು ಹೆಸರು. ನಲ್ಲೂರಿನಲ್ಲಿ ಸಿಕ್ಕ ಈ ಆತ್ಮಬಲಿದಾನ ಮಾಡಿಕೊಳ್ಳುತ್ತಿರುವ ಉಬ್ಬುಶಿಲ್ಪ (ನೋಡಿ ಚಿತ್ರ 4) ಸಿಕ್ಕಿದೆ. ಅದು ತ್ರುಟಿತಗೊಂಡಿದೆ, ವಿವರ ಅಪೂರ್ಣ. ಸುಮಾರು ಎರಡೂವರೆ ಅಡಿಗಳಷ್ಟು ಎತ್ತರವಾಗಿರುವ ಈ ಕಲ್ಲನ್ನು ಮರಕ್ಕೆ ಒರಗಿಸಿದ್ದಾರೆ. ಅದರಲ್ಲಿ ವೀರನು ತನ್ನ ಕತ್ತನ್ನು ಖಡ್ಗದಿಂದ ಕತ್ತರಿಸುತ್ತಿರುವಂತೆ ಕೆತ್ತಲಾಗಿದೆ. ಹಿಂಭಾಗದಲ್ಲಿ ಬಿದಿರುಕೊಂಬೆಯೊಂದನ್ನು ಕೆತ್ತಲಾಗಿದೆ. ತನ್ನ ಎಡಗೈಯಿಂದ ಕತ್ತಿಯನ್ನು ಬೀಸಿದಾಗ ಆದು ಬಲಪಾರ್ಶ್ವದೆಡೆಗೆ ಬರುವಂತೆಯೂ ಇದೆ. ವೀರನ ಮುಡಿಯ ಬಲಬದಿಯಲ್ಲಿ ಕುತ್ತಿಗೆಯ ಮೇಲ್ಭಾಗ[7] ದಲ್ಲಿ ಇರುವಂತೆಯೂ, ಕುತ್ತಿಗೆಯ ಬಳಿ ಮುಡಿಯ ರೀತಿಯಲ್ಲಿಯೇ ವೀರನ ಕಿವಿಯ ಆಭರಣವಿರುವುದನ್ನು ಆ ಶಿಲ್ಪದಲ್ಲಿ ಕಾಣಬಹುದು.

---

[4] ARIEp No. B 755 of 1916

[5] ಮಂಜುನಾಥ. ಎಂ. (2010). *ಕನ್ನಡದ ಪ್ರಾಚೀನ ಶಾಸನಗಳು.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಪುಟ 10

[6] ಅದೇ. ಪುಟ 10

[7] ಕರ್ನಾಟಕದ ವೀರಗಲ್ಲುಗಳು. *ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು.* ಪುಟ ಸಂಖ್ಯೆ: 162.

**ವಾಮನಮುದ್ರೆ ಕಲ್ಲು**

ನಲ್ಲೂರು ಗ್ರಾಮ ಊರಿನೊಳಗೆ ಪ್ರವೇಶಿಸುವ ಆರಂಭದಲ್ಲಿ ಸಿಗುವ ಹಾದಿಯ ಬದಿಯಲ್ಲೊಂದು (ನೋಡಿ ಚಿತ್ರ 6) ಶಿಲೆ ಇದೆ. ಇದರಲ್ಲಿ ಇರುವ ವಾಮನಮುದ್ರೆಯ ಚಿತ್ರವು ಈ ಜಾಗದಲ್ಲಿ ನಡೆದಿರುವ ದಾನದ ಸಾಕ್ಷಿಯಾಗಿದೆ. ದಾನದ ಉದ್ದೇಶವಿದ್ದರೂ ಆ ದಾನಶಾಸನದ ಬಗ್ಗೆ ಮಾಹಿತಿ ಇಲ್ಲ. ಸಾಮಾನ್ಯವಾಗಿ ಇದನ್ನು ಗಡಿಯನ್ನು ತಿಳಿಸುವ ಕಲ್ಲು ಎಂದು ಊಹಿಸಿದರೂ, ಕೆಲವು ಶಾಸನಗಳಲ್ಲಿ ಈ ವಾಮನಮುದ್ರೆಗೆ ಸಂಬಂಧಿಸಿದಂತೆ ಹೀಗೆ ತಿಳಿಸಿದೆ "ಊರ ದಕ್ಷಿಣಭಾಗದಲ್ಲಿ ಪೂರ್ವಾಭಿಮುಖವಾಗಿ ನೆಟ್ಟಿರುವ ಸಾಧ್ಯತೆಯಿದೆ" ಎಂದು ಸಾಮಾನ್ಯವಾಗಿ ವಾಮನಮುದ್ರೆ ಕಲ್ಲಿನ ಸ್ವರೂಪ ಮತ್ತು ಅದನ್ನು ನಿಲ್ಲಿಸಿದ ಜಾಗದ ಬಗ್ಗೆ ಹೇಳುತ್ತಾರೆ[8]. ಶೃಂಗೇರಿ ಪರಿಸರದಲ್ಲಿಯೇ ವಾಮನಮುದ್ರೆಕಲ್ಲು ಬಗ್ಗೆ ಕ್ರಿ.ಶ. 1458–59ರ ತೊಟ್ಟೋಡಿ[9] ಶಾಸನದಲ್ಲಿ ಈ ರೀತಿಯಾಗಿ ಹೇಳಿದೆ. ಅದು ಮಾಗಲು ನಾಡಿನ ಗಡಿಯೊಳಗೆ ಇದ್ದಿರಬಹುದಾದ ಹಳ್ಳಿಯ ಉಲ್ಲೇಖವನ್ನು ಮಾಡಿದೆ. ಆ ಶಾಸನದಲ್ಲಿ ಮಾಗಲುನಾಡಿನ ಗಡಿ[10] ಶಾಸನೋಕ್ತವಾಗಿ ತಿಳಿಸಿದೆ. ಆದರೆ ಪ್ರಸ್ತುತ ವಾಮನಮುದ್ರೆ ಕಲ್ಲು ಹೊರತು ಪಡಿಸಿದರೆ ಶಾಸನವಿಲ್ಲ ಬಹುಶಃ ಅದು ಲಭ್ಯವಾಗಿದ್ದರೆ ಮತ್ತಷ್ಟು ಅಧ್ಯಯನಕ್ಕೆ ಪೂರಕವಾಗುತ್ತಿತ್ತು.

ಒಟ್ಟಿನಲ್ಲಿ ಮೇಲೆ ತಿಳಿಸಿದ ಎಲ್ಲಾ ವೀರಗಲ್ಲುಗಳ ಸ್ವರೂಪ ಗಮನಿಸಿದಾಗ ಶೃಂಗೇರಿಗಿಂತ ಕಿಗ್ಗ ಪ್ರಾಚೀನ, ಧಾರ್ಮಿಕವಾಗಿ ಕಿಗ್ಗದ ನರಸಿಂಹ ಪರ್ವತವು ಶೃಂಗಮೂಲದ ವೈಶಿಷ್ಟತೆ ಪ್ರಕಟಿಸುವಂತೆ ಶೃಂಗೇರಿಯಲ್ಲಿ ಈ ಒಂದು ಪ್ರದೇಶದಲ್ಲಿ ಮಾತ್ರ ಈ ಬಗೆಯ ವಿವಿಧ ರೀತಿಯ ವೀರಗಲ್ಲುಗಳು ಲಭ್ಯವಾಗುತ್ತದೆ. ಕಾರ್ಕಳದ ಭೈರರಸರು ಮತ್ತು ಸ್ಥಳೀಯರ ನಡುವೆ ಹೋರಾಟವಿದ್ದಿರಬಹುದೇ? ಎಂಬ ಪ್ರಶ್ನೆ ಎದುರಾಗುತ್ತದೆ. ಅಲ್ಲಿ ದೊರೆತ ದೊಡ್ಡ ವೀರಗಲ್ಲು ಇದಕ್ಕೆ ಸಾಕ್ಷಿಯಾಗುತ್ತದೆ. ಪ್ರಾಕೃತಿಕವಾಗಿ ಅಲ್ಲದಿದ್ದರೂ ವೈರಿಗಳ ನಡುವಿನ ಯುದ್ಧದ ಸ್ವರೂಪವನ್ನು ತಿಳಿಸಲು ಹುಲಿಬೇಟೆಯ ಉಬ್ಬುಶಿಲ್ಪದ ವೀರಗಲ್ಲು ಇದ್ದಿರಬಹುದು. ಕೆಳದಿ ಅರಸರು ಶೃಂಗೇರಿ ಮಠಕ್ಕೆ ಆದಾಯ ತಪ್ಪುತ್ತಿದ್ದ ಜಾಗದಿಂದ ಪುನಃ ಶಿಸ್ತಿಗೆ ಒಳಪಡಿಸಿ ಮಠದ ಆಸ್ತಿಗೆ ಸಂಬಂಧಿಸಿದ ಗಡಿಯನ್ನು ಗುರುತಿಸುವ ವಾಮನಮುದ್ರೆ ಕಲ್ಲು ಇರಬಹುದೇ ಎನಿಸಿತು. ಈ ವೀರಗಲ್ಲುಗಳು ಗ್ರಾನೈಟ್ ಶಿಲೆಗಳಿಂದ ಕೆತ್ತನೆಯಾಗಿದೆ. ಆಗುಂಬೆ ಸಮೀಪದ ಭೂಪ್ರದೇಶವಾಗಿ, ಸದಾ ಮಳೆ ನೀರಿಗೆ ಈ ವೀರಗಲ್ಲುಗಳು ಶಿಥಿಲವಾಗಿಯೂ, ಈಗೀನ ಸ್ಥಿತಿಯಲ್ಲಿ ಲಭ್ಯವಾಗಿರುವುದೇ ಹೆಚ್ಚು.

**ಆಕರ ಗ್ರಂಥಗಳು**


- ಎಫಿಗ್ರಾಫಿಯ ಕರ್ನಾಟಿಕಾ, ಸಂಪುಟ 11 (ಪರಿಷ್ಕೃತ).
- ಕರ್ನಾಟಕದ ವೀರಗಲ್ಲುಗಳು. *ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು.*
- ಕೈದಾಳ ರಾಮಸ್ವಾಮಿ ಗಣೇಶ. *ಶಾಸನ ಸರಸ್ವತಿ.* 20007–2008, ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಒಂದು ಶಾಸನ


[8] ಎಫಿಗ್ರಾಫಿಯ ಕರ್ನಾಟಿಕಾ, ಸಂಪುಟ 11 (ಪರಿಷ್ಕೃತ), ಶೃಂಗೇರಿ–260.
[9] ಅದೇ. ಶೃಂಗೇರಿ–66
[10] ರಾಮಚಂದ್ರ, ಜಿ.ಎಸ್. (2017). *ಶೃಂಗೇರಿ ತಾಲ್ಲೂಕು ದೇವಾಲಯಗಳ ಐತಿಹಾಸಿಕ ಅಧ್ಯಯನ.* ಪುಟ 153.

- ಮಂಜುನಾಥ. ಎಂ.ಜಿ. (2011). *ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದಿ ಶಾಸನಗಳು.* ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ಮಂಜುನಾಥ. ಎಂ. (2010). *ಕನ್ನಡದ ಪ್ರಾಚೀನ ಶಾಸನಗಳು.* ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ.
- ರಾಮಚಂದ್ರ, ಜಿ.ಎಸ್. (2017). *ಶೃಂಗೇರಿ ತಾಲ್ಲೂಕು ದೇವಾಲಯಗಳ ಐತಿಹಾಸಿಕ ಅಧ್ಯಯನ.* ಪುಟ 153.


**ಅನುಬಂಧ 1: ಛಾಯಾಚಿತ್ರಗಳು**




**ಚಿತ್ರ 1 : ಶೃಂಗೇರಿ ತಾಲ್ಲೂಕಿನ ನಕಾಶೆ**



ಚಿತ್ರ 2 : ಅಕ್ಷರವಿಲ್ಲದ ಚಿತ್ರ ಸಹಿತ ಶಿಲ್ಪ



ಚಿತ್ರ 3 : ಪಲ್ಲಕ್ಕಿ ಹೊತ್ತಶಿಲ್ಪ ವೀರಗಲ್ಲು



ಚಿತ್ರ 4 ಸಿಡಿದಲೆ ಶಿಲ್ಪ



ಚಿತ್ರ ೫ ಹುಲಿಬೇಟೆ ವೀರಗಲ್ಲು



**ಚಿತ್ರ 6: ವಾಮನ ಮುದ್ರೆ ಕಲ್ಲು**



ಚಿತ್ರ 7 : ಮತ್ತೊಂದು ವೀರಗಲ್ಲು



ಚಿತ್ರ 8 : ಪಲ್ಲಕ್ಕಿ ಶಿಲ್ಪವಿರುವ ಕಲ್ಲಿನ ಮುಂದೆ ಒಂದು ಪೀಠ